**O.S. 277-24                    PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ V K H, ವಕೀಲರಿಂದಃ**

6. ಈರಪ್ಪನ ಹೆಂಡತಿ ಹೆಸರು ಈರಬಸವ್ವ. ಇಮರ ಮರಣ ಹೊಂದಿದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ಹಾಗೂ ವಾರಸುದಾರರ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಶಿವಪ್ಪನ ಹೆಂಡತಿ ಮಹಾದೇವಿ ರವರು ಮರಣ ಹೊಂದಿದ ಬಗ್ಗೆ ದಾಖಲೆ ಹಾಜರಪಡಿಸಿರುವ ಬಗ್ಗೆ ಗೊತ್ತಿಲ್ಲ. ಶಿವಪ್ಪ ಹಾಗೂ ಮಹಾದೇವಿ ರವರ ವಾರಸಾ ದಾಖಲೆ ಹಾಜರಪಡಿಸಿಲ್ಲ. ವಾರಸುದಾರರು ಇದ್ದರೂ ಇಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

7. ಫಕ್ಕೀರಪ್ಪ ಹಾಗೂ ಆತನ ಹೆಂಡತಿ ಮರಣ ಹೊಂದಿದ ಬಗ್ಗೆ ಹಾಗೂ ಅವರ ವಾರಸುದಾರರ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ವಾರಸುದಾರರ ಬಗ್ಗೆ ದಾಖಲೆ ಹಾಜರಪಡಿಸಲು ತೊಂದರೆ ಇಲ್ಲ. ಫಕ್ಕೀರಪ್ಪನಿಗೆ ಎಷ್ಟು ಜನ ವಾರಸುದಾರರು ಇದ್ದಾರೆ ಅಂತಾ ಗೊತ್ತಾಗುತ್ತದೆ ಎಂದು ವಾರಸಾ ಪ್ರಮಾಣ ಪತ್ರವನ್ನು ಉದ್ದೇಶಪೂರ್ವಕವಾಗಿ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಫಕ್ಕೀರಪ್ಪನಿಗೆ 4 ಜನ ವಾರಸುದಾರರು ಅಂದರೆ ಸರಿ. ಬ್ಯಾಹಟ್ಟಿ ಗ್ರಾಮದಲ್ಲಿರುವ ಮನೆ ನಂಃ 453 – 454 ಇತ್ತು, ಈಗ ಬದಲಾವಣೆಯಾಗಿದೆ ಗೊತ್ತಿಲ್ಲ. ಅದರ ಪೂರ್ವದ ನಂಃ 607. ಸದರಿ ಆಸ್ತಿಯ ದಾಖಲೆಗಳನ್ನು ಹಾಜರಪಡಿಸಿದ್ದೇನೆ. ಮನೆ ನಂಃ 607 ರ ಚಕ್ಕುಬಂದಿ ಪೂರ್ವಕ್ಕೆಃ ದಾರಿ, ಉತ್ತರಕ್ಕೆಃ ದಾರಿ, ದಕ್ಷಿಣಕ್ಕೆಃ ಬೆಂಗೇರಿ ರವರ ಮನೆ, ಪಶ್ಚಿಮಕ್ಕೆಃ ಪೋಲಿಸ ಪಾಟೀಲ ರ ಮನೆ. ಈ ಮೇಲೆ ಹೇಳಿರುವ ಚಕ್ಕುಬಂದಿಯಲ್ಲಿರುವ ಮನೆ ಈಗ ಅಸ್ತಿತ್ವದಲ್ಲಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ - ನಂಃ 7 ಮೇಲೆ ಹೇಳಿದ ಮನೆಯಲ್ಲಿ ವಾಸವಾಗಿದ್ದಾನೆ ಅಂದರೆ ಸರಿಯಲ್ಲ. 7 ನೇ ಪ್ರತಿವಾದಿ ಮನೆ ಬಿದ್ದಿದ್ದರಿಂದ ಅದನ್ನು ಕಟ್ಟಿಸುತ್ತಿದ್ದಾನೆ ಅಂದರೆ ಅವರೆ ಕೆಡವಿ ಕಟ್ಟಿಸುತ್ತಿದ್ದಾರೆಂದು ಹೇಳುತ್ತಾರೆ. ಸದರಿ ಮನೆ 7 ನೇ ಪ್ರತಿವಾದಿಯ ಸ್ವಂತ ಮನೆ ಅಂದರೆ ಸರಿಯಲ್ಲ. ದಾವಾ ಎರಡು ಮನೆಗಳಲ್ಲಿ ನಾನು ಎಂದೂ ವಾಸವಾಗಿಲ್ಲ ಅಂದರೆ ಸರಿಯಲ್ಲ. ನಾನು ವಾಸವಿಲ್ಲದಿದ್ದರೂ ಸಹ ಕಬ್ಜೆಯಲ್ಲಿದ್ದೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸುಮಾರು ವರ್ಷಗಳಿಂದ ಉಡಚಮ್ಮನ ಗುಡಿ ಓಣಿಯಲ್ಲಿ ವಾಸವಾಗಿದ್ದೇನೆ ಅಂದರೆ ಸರಿ.

**O.S. 277-24** **PW : 1**

ನಾನು ಮನೆಯಲ್ಲಿದಿದ್ದರೂ ಸಹ ಪ್ರತಿವಾದಿಗಳಿಗೆ ಸುಳ್ಳು ಕೇಸ ಹಾಕಿದ್ದೇನೆ ಅಂದರೆ ಸರಿಯಲ್ಲ. ವಾರಸಾ ಪ್ರಕಾರ, ವಾರಸುದಾರರನ್ನು ಬಿಟ್ಟು ಸುಳ್ಳು ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.